ಕಲ್ಲುರ್ಟಿ ಕಲ್ಕುಡ

ಅಮೃತ ಸೋಮೇಶ್ವರ



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಕಲ್ಲುರ್ಟಿ ಕಲ್ಕುಡ - ಅಮೃತ ಸೋಮೇಶ್ವರ ಅವರಿಂದ
'ಒಲುಮೆ' ಕೋಟೆಕಾರ್, ಮಂಗಳೂರು ತಾಲೂಕು, ದೂರವಾಣಿ - 2466755
ಪ್ರಕಾಶನ - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು.

ಮುದ್ರಣ	:	2007
ಬೆಲೆ	:	ರೂ. 25
ಪುಟಗಳು	:	24
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಅಕಾಡೆಮಿ
ಮುದ್ರಣ	:	ಪವನ್ ಗ್ರಾಫಿಕ್ಸ್ ಅಳಕೆ, ಮಂಗಳೂರು - 575 003. Ph : 92428 85743.

ಮಕ್ಕಳಿಗಾಗಿ ಕತೆಗಳು - ೩

ಮಕ್ಕಳಿಗಾಗಿ ಕತೆ

ಕಲ್ಲುರ್ಟಿ ಕಲ್ಕುಡ

ಅಮೃತ ಸೋಮೇಶ್ವರ

ಕರ್ನಾಟಕ ತುಳು ಸಾಹಿತ್ಯ ಅಕಾಡಮಿ
ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3.
ದೂರವಾಣಿ / ಫ್ಯಾಕ್ಸ್ : 0824- 2459389
Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ "ಅಜ್ಜಿ ಕತೆಗಳು" ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದ ಇದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ತುಳು ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, 1998ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಗೊಳಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ತುಳುವಿನ 'ಕಲ್ಲುರ್ಟಿ ಕಲ್ಕುಡೆ' ಕತೆ ಕನ್ನಡದಲ್ಲಿ **"ಕಲ್ಲುರ್ಟಿ ಕಲ್ಕುಡ"** ಎಂಬ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಗೊಂಡು ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಅಜ್ಜಿ ಕತೆಗಳಾದರೂ, ಮಕ್ಕಳಿಗೆ ನೀತಿಯ ಪಾಠದ ಅರಿವು ಮೂಡಿಸುತ್ತದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಪ್ರೊ. ಅಮೃತ ಸೋಮೇಶ್ವರ ಇವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಪವನ್ ಗ್ರಾಫಿಕ್ಸ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು

ಕಲ್ಲುರ್ತಿ ಕಲ್ಕುಡ

ಅಂದು ಆದಿತ್ಯವಾರ. ಶಾಲೆಯ ಮಕ್ಕಳು ಪ್ರವಾಸದ ಉಲ್ಲಾಸದಲ್ಲಿದ್ದರು. ತುಳುನಾಡಿನ ಕೆಲವು ಚಾರಿತ್ರಿಕ ಸ್ಥಳಗಳನ್ನು ಅವರು ನೋಡಿದರು. ಅವರಿಗೆ ತುಂಬಾ ಸಂತೋಷವಾಯಿತು. ನಗು ನಲಿವು ತುಂಬಿದ ಪ್ರವಾಸದ ಬಸ್ಸು ಕಾರ್ಕಳಕ್ಕೆ ಬಂದಿತು. ಕರಿಯ ಕಲ್ಲಿನ ಬೆಟ್ಟ. ಅದರ ಮೇಲೆ ನಿಂತಿತ್ತು ಕಗ್ಗಲ್ಲಿನ ಹಿರಿದಾದ ಒಂದು ಮೂರ್ತಿ. ಅದು ಪೂರ್ತಿ ಬತ್ತಲಾಗಿದ್ದರೂ ಅದೇಕೋ ಯಾರಿಗೂ ನಗು ಬರಲಿಲ್ಲ! ಬದಲಿಗೆ ಎಲ್ಲರೂ ಬೆಕ್ಕಸ ಹೊಂದಿದಂತೆ ತಲೆಯೆತ್ತಿ ಆ ಮೂರ್ತಿಯ ಮೋರೆಯನ್ನೆ ನೋಡಿದರು.

ಮಾಸ್ತರರೆಂದರು :

"ಇದು ಗೋಮಟ ಮೂರ್ತಿ. ಗುಮ್ಮಟ ದೇವರೆಂದೂ, ಗೋಮಟೇಶ್ವರನೆಂದೂ, ಬಾಹುಬಲಿಯೆಂದೂ ಕರೆಯುತ್ತಾರೆ."

"ಸರ್, ಮೊನ್ನೆ ಶಾಲೆಯ ಮೈದಾನದಲ್ಲಿ 'ಭರತ ಬಾಹುಬಲಿ' ಆಟ ಇತ್ತಲ್ಲ, ಅದೇ ಬಾಹುಬಲಿಯೇನು?"-ಎಂದು ಕೇಳಿದ ರವಿ.

"ಹೌದು, ಅವನೇ ಭರತರಾಜನ ತಮ್ಮ ಬಾಹುಬಲಿ. ಭುಜಬಲಿಯೆಂದೂ ಅವನಿಗೆ ಹೆಸರುಂಟು. ರಾಜ್ಯ ಸಿರಿ, ಸಂಪತ್ತು, ಸಂಸಾರ - ಎಲ್ಲವನ್ನೂ ತ್ಯಾಗಮಾಡಿದವನು" ಎಂದರು ಮಾಸ್ತರರು.

"ಇಷ್ಟು ದೊಡ್ಡ ಮೂರ್ತಿಯನ್ನು ನಾನು ಕಂಡಿಲ್ಲ!" ಅಚ್ಚರಿಯಿಂದ ಹೇಳಿದ ವಾಸು.

"ಇದಕ್ಕಿಂತಲೂ ದೊಡ್ಡ ಮೂರ್ತಿ ಶ್ರವಣಬೆಳಗೊಳ ಎಂಬಲ್ಲಿ ಇದೆ. ಅದು ಗಟ್ಟದ ಮೇಲಿನ ಊರು. ಆ ಮೂರ್ತಿಯನ್ನು ಕೆತ್ತಿಸಿ ಒಂದು ಸಾವಿರ ವರ್ಷ ಆಯಿತು. ಚಾವುಂಡರಾಯ ಎಂಬಾತ ಅದನ್ನು ಸ್ಥಾಪನೆ ಮಾಡಿದ. "- ಮಾಸ್ತರರು ವಿವರಿಸಿದರು.

"ಈ ಮೂರ್ತಿಯನ್ನು ಯಾರು ಮಾಡಿಸಿದರು?"- ಕೇಳಿದಳು ಗೀತು

"ಇದನ್ನು ಕೆತ್ತಿಸಿದವನು ಕಾರ್ಕಳದ ಅರಸ ವೀರಪಾಂಡ್ಯ ಭೈರವರಾಯ. ವೇಣೂರಿನಲ್ಲಿ ಇನ್ನೊಂದು ಗೋಮಟವಿಗ್ರಹ ಇದೆ. ಅದನ್ನು ತಿಮ್ಮಣ್ಣಾಜಿಲ ಎಂಬ ಅರಸ ಕೆತ್ತಿಸಿದ.

ಈಚೆಗೆ ಧರ್ಮಸ್ಥಳದಲ್ಲಿ ಬಾಹುಬಲಿ ಮೂತಿಯನ್ನು ಸ್ಥಾಪನೆ ಮಾಡಿದ್ದಾರೆ"

"ಇಷ್ಟು ದೊಡ್ಡ ಮೂರ್ತಿಯನ್ನು ಹೇಗೆ ನಿಲ್ಲಿಸಿದರು?"- ರವಿಯ ಪ್ರಶ್ನೆ.

"ಈ ಮೂರ್ತಿಯನ್ನು ಈ ಕಲ್ಲುಗುಡ್ಡದ ಬದಿಯಲ್ಲೇ ಕೆತ್ತಿಸಿದರಂತೆ. ಉದ್ದಕ್ಕೂ ಮಣ್ಣು ತುಂಬಿಸಿ ಬೇರೊಂದು ಮಾರ್ಗವನ್ನೇ ಮಾಡಿಸಿದರಂತೆ. ಇಪ್ಪತ್ತು ಚಕ್ರಗಳ ಬಂಡಿಯಲ್ಲಿ ಮೂರ್ತಿಯನ್ನು ಇರಿಸಿದರಂತೆ. ಭಾರೀ ಸಾಹಸದಿಂದ ಮೇಲೆ ಸಾಗಿಸಿದರಂತೆ. ಕೆತ್ತಿದ ಶಿಲ್ಪಿ ಕುಶಲತೆಯಿಂದ ಮೂರ್ತಿಯನ್ನು ನೆಟ್ಟಗೆ ನಿಲ್ಲಿಸಿದನಂತೆ.

"ಈ ಮೂರ್ತಿಯನ್ನು ಯಾರು ಕೆತ್ತಿದವರು?"-ಕೇಳಿದಳು ಶಶಿ.

"ಅಂ, ಅದು ಕೇಳಬೇಕಾದ ಸಂಗತಿ. ಆ ಶಿಲ್ಪಿಯ ಹೆಸರು ವೀರ ಕಲ್ಕುಡ, ಎಂದರೆ ಕಲ್ಲು ಕೆತ್ತುವ ಕೆಲಸದವನೆಂದು ಅರ್ಥ.

"ನಮ್ಮ ಮನೆಯ ಹತ್ತಿರ ಕಲ್ಕುಡ ದೈವದ ಸ್ಥಾನ ಇದೆ. ಅಲ್ಲಿ ನೇಮ ಆಗುತ್ತದೆ. ಆ ಕಲ್ಕುಡ ಯಾರು?"- ಎಂದು ಕೇಳಿದ ವಾಸು.

"ಹೌದು, ಆ ಕಲ್ಕುಡನೇ ವೀರ ಕಲ್ಕುಡ. ಅವನೊಬ್ಬ ದೊಡ್ಡ ಶಿಲ್ಪಿಯಾಗಿದ್ದ. ಈ ವಿಚಾರ ಅರಿತವರು ಕಡಮೆ. ಆ ಮಹಾ ಶಿಲ್ಪಿಯನ್ನು ದೈವವೆಂದು ಪೂಜಿಸುತ್ತಾರೆ, ಕೋಲ, ನೇಮ ಕೊಡುತ್ತಾರೆ."

ಮಕ್ಕಳಿಗೆ ಕುತೂಹಲವಾಯಿತು. "ಬೀರು ಕಲ್ಕುಡ ದೈವವಾದುದು ಹೇಗೆ?"- ಎಂದು ಕೇಳಿದ ಗೋಪಿ.

"ಅದೊಂದು ದೊಡ್ಡ ಕತೆ, ಹೇಳುತ್ತೇನೆ. ಮೊದಲು ನಾವು ಕೆಳಗೆ ಇಳಿಯೋಣ. ಓ ಅಲ್ಲಿ ಮರದ ನೆರಳಲ್ಲಿ ಕೂತುಕೊಳ್ಳೋಣ, ಬನ್ನಿ" ಎಂದು ಮಕ್ಕಳನ್ನು ಕರೆದುಕೊಂಡು ಮಾಸ್ತರರು ಕೆಳಗಿಳಿದರು. ಒಂದು ಆಲದ ಮರದ ನೆರಳಲ್ಲಿ ಎಲ್ಲರೂ ಕುಳಿತರು. ಕಟ್ಟಿ ತಂದಿದ್ದ ತಿನಿಸಿನ ಬುತ್ತಿಯನ್ನು ಬಿಡಿಸಿದರು. ಎಲ್ಲರೂ ಹಂಚಿ ಸಂತೋಷದಿಂದ ತಿಂದರು.

"ವೀರ ಕಲ್ಕುಡ ಹೇಗೆ ದೈವವಾದ?"- ಮತ್ತೊಮ್ಮೆ ಕೇಳಿದ ಗೋಪಿ.

"ನಿಲ್ಲು, ಹೇಳುತ್ತೇನೆ. ನಮ್ಮ ತುಳುನಾಡಿನಲ್ಲಿ ನಾನೂರು ಐನೂರು ದೈವಗಳಿವೆ. ದೈವಗಳನ್ನು ಭೂತಗಳೆಂದೂ ಹೇಳುತ್ತಾರೆ. ಹೆಚ್ಚಿನ ದೈವಗಳು ಒಂದು ಕಾಲದಲ್ಲಿ ಮನುಷ್ಯರಾಗಿಯೇ ಇದ್ದವರು, ತಮ್ಮ ಬದುಕಿನಲ್ಲಿ ಏನಾದರೂ ವಿಶೇಷವನ್ನು ಕಾಣಿಸಿದವರು, ವಿಶೇಷ ರೀತಿಯಲ್ಲಿ ಮರಣವನ್ನು ಹೊಂದಿದವರು. ಇಂಥವರನ್ನು ಮಹಿಮೆಗಾರರೆಂದು ನಂಬಿಕೊಂಡು ಬಂದರು. ದೈವಗಳೆಂದು ಕರೆದರು. ದೈವಸ್ಥಾನ, ಚಾವಡಿ ಕಟ್ಟಿಸಿದರು. ನೇಮ ಅಯನ ಮಾಡಿಸಿದರು. ಕಲ್ಕುಡನ ಕತೆ ಕೇಳಲು ನಿಮಗೆ ಆಸಕ್ತಿ ಇದೆಯೆಂದು ಗೊತ್ತಾಯಿತು. ಸಂತೋಷ. ಇಂಥ ಹಿಂದಿನ ಸಂಗತಿಗಳನ್ನು ತಿಳಿಯುವ ಬಯಕೆ ನಮ್ಮಲ್ಲಿ ಇರಬೇಕು. ನಾನು ಈಗ ಹೇಳುವ ವಿಚಾರ ದೈವದ ಪಾಡ್ದನದಲ್ಲಿ ಇದೆ."

"ಪಾಡ್ದನ ಎಂದರೆ ಏನು?"- ಕೇಳಿದ ರವಿ

"ದೈವದ ಕೋಲ ಅಥವಾ ನೇಮ ಎಂಬ ಉತ್ಸವ ಆಗುತ್ತದಲ್ಲವೇ? ಆ ವೇಳೆ ತೆಂಬರೆ ಎಂಬ ಚಿಕ್ಕ ಡೋಲನ್ನು ಬಡಿಯುತ್ತ ದೈವದ ಕತೆಯನ್ನು ದೈವದ ವೇಷ ಹಾಕುವ ಬಳಗದವರು ರಾಗವಾಗಿ ಹೇಳುತ್ತಾರೆ. ಬತ್ತದ ಗದ್ದೆಯಲ್ಲೂ ಒಮ್ಮೊಮ್ಮೆ ಹಾಡುವುದುಂಟು ಇಂತಹ ಕತೆಯನ್ನು ಪಾಡ್ದನ ಎನ್ನುತ್ತಾರೆ. ಇದು ಬರೇ ಕೈಕಾಲು ಇಲ್ಲದ ಕತೆಯೆಂದು ತಿಳಿಯಬೇಡಿ. ಹಿಂದಿನ ಕಾಲದ ಎಷ್ಟೋ ನಿಜ ಸಂಗತಿಗಳು ತಿಳಿಯಬೇಡಿ ಈ ಪಾಡ್ದನಗಳಲ್ಲಿ ಸೇರಿಕೊಂಡಿರುವುದುಂಟು. ಚರಿತ್ರೆಯ ಪುಸ್ತಕದಲ್ಲಿ ವೀರ ಕಲ್ಕುಡನ ಹೆಸರಿಲ್ಲ ಹೆಸರು, ವಿಷಯ ಶಾಶ್ವತವಾಗಿರಲೆಂದು ಕಲ್ಲಿನ ಮೇಲೆ ಬರೆದ ಶಾಸನಗಳಲ್ಲಿಯೂ ಇಲ್ಲ. ಆದರೆ ಗೋಮಟೇಶ್ವನನ್ನು ಸ್ಥಾಪಿಸಿದ ಅರಸನ ಹೆಸರು ಚರಿತ್ರೆಯಲ್ಲಿದೆ. ನಮ್ಮ ನಾಡಿನ ಸಾಮಾನ್ಯ ಜನರ ಚರಿತ್ರೆಯೇ ಬೇರೆ. ಎಷ್ಟೋ ಸತ್ಯಸಂಗತಿಗಳು ಹಳ್ಳಿಯ ಜನಪದ ಸಾಹಿತ್ಯದಲ್ಲಿ ಅಡಗಿರುತ್ತವೆ. ಬರವಣಿಗೆಯ ನೆರವಿಲ್ಲದೆ, ಕೇವಲ ಕೇಳುವಿಕೆಯಿಂದ ಬಾಯಿಯಿಂದ ಬಾಯಿಗೆ ಹರಿದು ಬಂದ ಸಾಹಿತ್ಯವೇ ಜನಪದ ಸಾಹಿತ್ಯ. ಪಾಡ್ದನ, ಕಬಿತ, ಅಜ್ಜಿಕತೆ, ಗಾದೆ, ಒಗಟು, ಇವೆಲ್ಲ ಜನಪದ ಸಾಹಿತ್ಯಕ್ಕೆ ಸೇರುತ್ತವೆ. ತುಳುವಿನಲ್ಲಿ ಜನಪದ ಸಾಹಿತ್ಯದ ದೊಡ್ಡ ಕಣಜವೇ ಇದೆ. ನೆನಪಿನ ಬಲದಿಂದಲೇ ಇದು ಉಳಿದುಕೊಂಡು ಬಂದಿದೆ.

ವೀರ ಕಲ್ಕುಡ ಹುಟ್ಟಿದ ಊರು ಕೆಲ್ಲತ್ತ ಮಾರ್ನಾಡು, ಕೆಲ್ಲಪುತ್ತಿಗೆ ಎಂದೂ ಆ ಊರನ್ನು ಕರೆಯುತ್ತಾರೆ. ಅಲ್ಲಿ ಕಲ್ಲಿನ ಕೆಲಸದಲ್ಲಿ ಗಟ್ಟಿಗರಾದ ಕಲ್ಲುಕುಟ್ಟಿಗರ ದೊಡ್ಡ ಪೀಳಿಗೆಯೇ ಇತ್ತು. ಅವರಲ್ಲಿ ಹಲವರು ಉತ್ತಮ ಶಿಲ್ಪಿಗಳಾಗಿದ್ದರು. ಕಲ್ಕುಡನ ತಾಯಿ ಇರುವದಿ. ವೀರಭದ್ರಿ ಎಂದೂ ಹೇಳುವವರಿದ್ದಾರೆ. ತಂದೆ ಶಂಭು ಕಲ್ಕುಡ. ಆ ಕಾಲದ ಪ್ರಸಿದ್ಧ ಶಿಲ್ಪಿಯಾಗಿದ್ದ ಶಂಭು ಕಲ್ಕುಡ ಕಲ್ಕುಡನಿಗೆ ನಾಲ್ಕು ಮಂದಿ ಅಣ್ಣಂದಿರು. ಅವರ ಹೆಸರು ಎಲ್ಯಣ್ಣ, ಮಲ್ಲಣ್ಣ, ಬಿಕ್ಕುರು, ನಂದು ಎಂದು ವೀರನೂ ಕಾಳಮ್ಮನೂ ಅವಳಿ ಮಕ್ಕಳಾಗಿ ಹುಟ್ಟಿದರು.

ಇವರು ತಾಯಿಯ ಬಸಿರಲ್ಲಿ ಇರುವಾಗ ಶಂಭು ಕಲ್ಕುಡನಿಗೆ ಊರು ಬಿಡಬೇಕಾಗಿ ಬಂತು.

"ಯಾಕೆ ಊರು ಬಿಡಬೇಕಾಯಿತು?"- ಎಂದು ಕೇಳಿದಳು ಕನಕ.

"ಬೆಳಗೊಳದ ಅರಸನ ಓಲೆ ಬಂದಿತ್ತು ಶಂಭುಕಲ್ಕುಡನಿಗೆ. ಬೆಳಗೊಳದಲ್ಲಿ ಬಹುದೊಡ್ಡ ಗೋಮಟ ಮೂರ್ತಿ ನಿರ್ಮಿಸುವ ಸಂಕಲ್ಪವನ್ನು ಅರಸ ಮಾಡಿದ್ದ. ಅದು ಎಷ್ಟೋ ವರ್ಷ ನಡೆಯುವ ಕೆಲಸ. ಅದಕ್ಕೆ ಕಲ್ಲುಕುಟಿಗರ ಒಂದು ದೊಡ್ಡ ತಂಡವೇ ಬೇಕಾಗಿತ್ತು. ಆ ಕಲ್ಕುಡರ ಕೂಟಕ್ಕೆ ಶಂಭು ಕಲ್ಕುಡ ಮುಖ್ಯ ಶಿಲ್ಪಿಯಾಗಬೇಕೆಂಬುದೇ ಓಲೆಯ ಒಕ್ಕಣೆ.

ಶಂಬು ಕಲ್ಕುಡ ಇರುವದಿಯನ್ನು ಕರೆದು ಬೆಳಗೊಳದ ಓಲೆಯ ವಿಚಾರವನ್ನು ಹೇಳಿದ ಲೋಕದಲ್ಲಿ ಇದುವರೆಗೆ ಆಗದಿರುವ ಚೋದಿಗದ ಕೆಲಸಕ್ಕಾಗಿ ಹೋಗಿ ಬರುವೆನೆಂದು ಹೇಳಿದ. "ಯಾವಾಗ ಹಿಂದೆ ಬರುತ್ತೀರಿ?"- ಎಂದು ಕೇಳಿದಳು ಇರುವದಿ "ಆದಷ್ಟು ಬೇಗ ಬರುವೆ" ಎಂದು ಶಂಭುಕಲ್ಕುಡ ಮಡದಿಗೆ ಸಮಾಧಾನ ಹೇಳಿದ. ಹಾಗೆಯೇ ಮನೆಗೆ ಬೇಕಾಗುವ ಕೆಲವು ವಸ್ತುಗಳನ್ನು ಒದಗಿಸಿ ತಂದಿಟ್ಟ ತನ್ನೊಂದಿಗೆ ಕೆಲವರು ಕಲ್ಲಿನ ಕೆಲಸಗಾರರನ್ನು ಸೇರಿಸಿಕೊಂಡು ಗಟ್ಟದ ಮೇಲಿನ ಹಾದಿಯನ್ನು ಹಿಡಿದ.

ಕೆಲವು ದಿನಗಳ ಪಯಣವಾಯಿತು. ಶಂಭು ಕಲ್ಕುಡ ಬೆಳಗೊಳದ ಸೀಮೆಗೆ ಹೋದ. ಅರಸನನ್ನು ಕಂಡು ವಂದನೆ ಸಲ್ಲಿಸಿದ.

ಅರಸ ಶಂಭು ಕಲ್ಕುಡನನ್ನು ವಿಶ್ವಾಸದಿಂದ ಮಾತನಾಡಿಸಿದ. "ಬಂದೆಯಾ ಶಂಭು ಕಲ್ಕುಡಾ? ಒಳ್ಳೆಯದಾಯಿತು. ಅದೋ ಅಲ್ಲಿ ಕಾಣುವ ಗಿರಿಯ ಮೇಲೆ ದೊಡ್ಡದೊಂದು ಬಂಡೆಕಲ್ಲಿದೆಯಲ್ಲಾ, ಅದರಲ್ಲಿ ಗೋಮಟಸ್ವಾಮಿಯ ಹಿರಿದಾದೊಂದು ಮೂರ್ತಿಯನ್ನು ಕೆತ್ತಬೇಕು. ಇದುವರೆಗೆ ಎಲ್ಲೂ ಇಲ್ಲದಿರುವ ದೊಡ್ಡ ಆಕಾರದ ಮೂರ್ತಿ ಆಗಬೇಕು. ಕಲ್ಕುಡರ ಕೂಟಕ್ಕೆ ಶ್ರೇಷ್ಠನಾದ ಶಿಲ್ಪಿ ನೀನಾಗಬೇಕು" ಎಂದು ಅಪ್ಪಣೆ ಕೊಡಿಸಿದ ಅರಸ. ಶಂಭು ಕಲ್ಕುಡ ಅರಸನಿಗೆ ಮಣಿದು ಪಡಿಯಕ್ಕಿ ಹಿಡಿದ.

ಶಂಭು ಕಲ್ಕುಡ ಗುಮ್ಮಟ ಸ್ವಾಮಿಯ ಮೂರ್ತಿಯನ್ನು ಕೆತ್ತಲು ಮುಂದಾದ. ಒಳ್ಳೆಯ

ಮುಹೂರ್ತದಲ್ಲಿ ನಾಲ್ಕು ದಿಕ್ಕಿನ ದೇವರುಗಳನ್ನು ನೆನೆದು ಕಲ್ಲಿಗೆ ಉಳಿಯನ್ನು ಊರಿದ. ಆ ಹಿರಿದಾದ ಶಿಲೆಯಲ್ಲಿ ನಿಧಾನವಾಗಿ ಬಾಹುಬಲಿಯ ಆಕಾರವು ಗೋಚರಿಸತೊಡಗಿತು. ದಿನ, ತಿಂಗಳು, ವರ್ಷಗಳು ಉರುಳಿದವು.

ಬಸುರಿಯಾಗಿದ್ದ ಮಡದಿಯನ್ನು ಮನೆಯಲ್ಲಿ ಬಿಟ್ಟುಹೋಗಿದ್ದ ಶಂಭುಕಲ್ಕುಡ. ತಿಂಗಳು ತುಂಬಿ ಇರುವದಿ ಅವಳಿ ಮಕ್ಕಳನ್ನು ಹೆತ್ತಳು. ಮಕ್ಕಳಲ್ಲಿ ಒಂದು ಗಂಡು, ಮತ್ತೊಂದು ಹೆಣ್ಣು. ಗಂಡುಮಗುವಿಗೆ ವೀರ ಎಂದು ಹೆಸರಿಟ್ಟರು, ಹೆಣ್ಣು ಮಗುವನ್ನು ಕಾಳಮ್ಮ ಎಂದು ಕರೆದರು. ಮಕ್ಕಳು ಬಳೆಯತ್ತ ಬಂದರು.

ವೀರನ ಅಣ್ಣಂದಿರು ಬೇರೆ ಬೇರೆ ಬಗೆಯ ಕಸುಬುಗಳನ್ನು ಕಲಿತರು. ಹಿರಿಯ ಹುಡುಗ ಮರದ ಕೆಲಸ ಕಲಿತ. ಮತ್ತಿನವ ಕಬ್ಬಿಣದ ಕೆಲಸ ಕಲಿತ. ಮೂರನೆಯವನು ಚಿನ್ನದ ಕೆಲಸ ಕಲಿತ. ಮತ್ತೊಬ್ಬ ತಾಮ್ರದ ಕೆಲಸ ಕಲಿತ. ಚಿಕ್ಕ ಮಗ ವೀರನಿಗೆ ಇನ್ನೂ ಆಟವಾಡುವ ವಯಸ್ಸು. ಆದರೂ ಆಗಲೇ ಹಟ ಹಿಡಿದು ಕಲ್ಲಿನ ಕೆಲಸವನ್ನು ಕಲಿತ.

"ಅವನಿಗೆ ಯಾಕೆ ಅಷ್ಟು ಹಟ?"- ಎಂದು ಕೇಳಿದಳು ಗೀತು

"ಅದಕ್ಕೊಂದು ಕಾರಣವಿದೆ. ವೀರ ತನ್ನ ಸಂಪ್ರಾದಾಯದ ಮಕ್ಕಳೊಂದಿಗೆ ಆಟವಾಡಲು ಹೋಗಿದ್ದ. ಹುಡುಗರು ವೀರನೊಡನೆ, "ನಿನ್ನ ತಂದೆ ಯಾರು? ನಾವು ನೋಡಲಿಲ್ಲ" ಎಂದರು. ಅಷ್ಟು ಮಾತ್ರವಲ್ಲದೆ,"ಅಪ್ಪ ಇಲ್ಲದ ಮಗ ನಮ್ಮೊಂದಿಗೆ ಆಡಲು ಬರಬೇಡ"-ಎಂದರು.

ವೀರ ತಲೆತಗ್ಗಿಸಿಕೊಂಡು ಬಾಡಿದ ಮೋರೆಯಿಂದ ಬಂದ. ಹುಡುಗರು ಕಲೆ ಹೇಳಿ ಕುಲ ದೂಷಣೆ ಮಾಡಿದರೆಂದು ತಾಯಿಯಲ್ಲಿ ಹೇಳಿದ. ಅದಕ್ಕೆ ಆಕೆ, "ಅಯ್ಯೋ ಮಗು, ನಿನ್ನ ತಂದೆ ಹೆಸರು ಪಡೆದ ದೊಡ್ಡ ಶಿಲ್ಪಿ, ತಿಳಿಯಿತೇ? ನೀನು ನನ್ನ ಬಸಿರಲ್ಲಿ ಇರುವಾಗ ಬೆಳಗೊಳದ ಅರಸರ ಓಲೆ ಬಂದಿತ್ತು. ಕಲ್ಲಿನ ಕೆಲಸಕ್ಕೆಂದು ಹೋದವಳು ಇನ್ನೂ ಬಂದಿಲ್ಲ," ಎಂದಳು.

"ನನಗೆ ತಂದೆಯನ್ನು ನೋಡಬೇಕು, ತಂದೆಯವರು ಮಾಡಿದ ಶಿಲ್ಪದ ಕೆಲಸ ನೋಡಬೇಕು. ಅದರ ಹಾಗಿರುವ ಕೆಲಸವನ್ನು ಮಾಡಬೇಕು"- ಎಂದ ವೀರ.

"ಕೆಲಸವೆಲ್ಲ ಕಲಿತು ನಿಪುಣನಾದ ಮೇಲೆ ಹೋಗಬಹುದು"- ಎಂದಳು ಇರುವದಿ.

ಕೆಲ್ಲತ್ತ ಮಾರ್ನಾಡಿನಲ್ಲಿ ವೀರನ ಮಾವ ಸೂವ ಕಲ್ಕುಡನಿದ್ದ ಅವನೂ ಕಲ್ಲಿನ ಕೆಲಸದಲ್ಲಿ ಗಟ್ಟಿಗ. ವೀರ ತನ್ನ ಮಾವನಿಂದ ಕಲ್ಲಿನ ಕೆಲಸದ ಮರ್ಮವನ್ನು ಕಲಿತ. ಆರು ವರ್ಷ ಕಲಿಯುವುದನ್ನು ಆರು ತಿಂಗಳಲ್ಲಿ ಕಲಿತ, ಆರು ತಿಂಗಳು ಕಲಿಯುವುದನ್ನು ಆರು ದಿನಗಳಲ್ಲಿ ಕಲಿತ. ಶಿಲ್ಪ ಕಲೆಯಲ್ಲಿ ಗಟ್ಟಿಗನಾದ.

ತಂದೆಯನ್ನು ನೋಡಿ ಬರುವೆನೆಂದು ತಾಯಿಯಲ್ಲಿ ಅನುಮತಿ ಕೇಳಿದ . ಮಗನಿಗೆ ದಾರಿಯ ಬುತ್ತಿಯನ್ನು ಕಟ್ಟಿಕೊಟ್ಟಳು ಇರುವದಿ. ವೀರ ಕಲ್ಕುಡ ತಂದೆಯನ್ನು ಹುಡುಕಾಡಿಕೊಂಡು ಹೊರಟ. ಅಡ್ಡವಾದ ಹೊಳೆ, ನೀಳವಾದ ಗುಡ್ಡ, ಆನೆ ಕಟ್ಟುವ ಅಶ್ವತ್ಥಮರ, ಕುದುರೆ ಕಟ್ಟುವ ಕಿರುಗೋಳಿ, ಕೊಕ್ಕಡ, ನೀರೆಂಕಿ, ಸರೊಳಿ ಇತ್ಯಾದಿ ದಾಟಿ ಸಂಪಕಟ್ಟೆ ಎಂಬಲ್ಲಿಗೆ ಮುಟ್ಟಿದ.

ಬೆಳುಗೊಳದಲ್ಲಿ ಬಾಹುಬಲಿಯ ಮಹಾಮೂರ್ತಿಯ ಕೆತ್ತನೆಯ ಕೆಲಸ ಕೆಲವು ವರ್ಷಗಳಕಾಲ ನಡೆದು ಪೂರ್ಣಗೊಂಡಿತು. ವಿಶೇಷ ವೈಭವದಲ್ಲಿ ಮೂರ್ತಿಯ ಪ್ರತಿಷ್ಠಾಪನೆ, ಮಸ್ತಕಾಭಿಷೇಕ ಉತ್ತಮಗಳು ಜರಗಿದವು. ಶಿಲ್ಪಿಗಳಿಗೆಲ್ಲಾ ಸನ್ಮಾನವಾಯಿತು. ಅರಸನಿತ್ತ ಉಡುಗೊರೆ ಇತ್ಯಾದಿಗಳೊಂದಿಗೆ ಊರಿಗೆ ಹೊರಟ ಶಂಭುಕಲ್ಕುಡ.

ದಾರಿಯಲ್ಲಿ ಒಂದೆಡೆ ಕುದುರೆಯಿಂದ ಇಳಿದು ಆಲದ ಮರದ ಕಟ್ಟೆಯೊಂದರ ಮೇಲೆ ಆಯಾಸ ಪರಿಹಾರಕ್ಕಾಗಿ ಕುಳಿತುಕೊಂಡ. ಗಾಳಿ ಹಿತವಾಗಿ ಬೀಸುತಿತ್ತು.

ಅದೇ ಕಟ್ಟೆಯ ಕಡೆ ಬಂದ ವೀರಕಲ್ಕುಡ. ತಂದೆಯ ಗುರುತು ಮಗನಿಗಿಲ್ಲ, ಮಗನ ಗುರುತು

ತಂದೆಗಿಲ್ಲ. ತರುಣನ ಮುಖವನ್ನೆ ದಿಟ್ಟಿಸಿದ. ಮನಸ್ಸಿನಲ್ಲಿ ಏನೋ ಒಂದು ವಿಧದ ಕುತೂಹಲ, ಆತ್ಮೀಯತೆ ಹುಟ್ಟಿದಂತಾಯಿತು. ಶಂಭು ಕಲ್ಕುಡ ತರುಣನನ್ನು ಮಾತನಾಡಿಸಿದ.

"ಯಾರಪ್ಪಾ ನೀನು? ಸೆಟ್ಟಿ, ಸೇನವರ ಕಡೆಯವನೋ? ಬಂಟಬಾರಗರ ಕೂಟದವನೋ? ಅಥವಾ ಅರಸುಮಗ ಮುದ್ದು ಕುಮಾರನೋ?"

"ನಾನು ಕೆಲ್ಲತ್ತ ಮಾರ್ನಾಡಿನ ಶಂಭು ಕಲ್ಕುಡರ ಮಗ. ಹೆಸರು ವೀರ ಕಲ್ಕುಡ"- ಎಂದ ತರುಣ. ಅದನ್ನು ಕೇಳಿ ಶಂಭು ಕಲ್ಕುಡನಿಗೆ ಸಂತೋಷದಿಂದ ನೆಲೆಯೇ ತಪ್ಪಿತು. ಹಸಿವು ಬಾಯಾರಿಕೆ ಮಾಯವಾಯಿತು. ತಟ್ಟನೆ ಮೇಲೆದ್ದು ತರುಣನನ್ನು ಪ್ರೀತಿಯಿಂದ ತಬ್ಬಿಕೊಂಡ. "ಮಗೂ, ನೀನು ನನ್ನ ಮಗ, ನಾನೇ ನಿನ್ನ ತಂದೆ" ಎಂದ. ಇಬ್ಬರ ಕಣ್ಣುಗಳಲ್ಲೂ ಸಂತೋಷದ ಕಂಬನಿ ಹರಿಯಿತು. ಇಬ್ಬರೂ ಮಾತಿಗೆ ತೊಡಗಿದರು. ಮನೆಯ, ಕುಟುಂಬದ, ಊರಿನ ಸಂಗತಿಗಳನ್ನು ಬಾಯಿತುಂಬ ಮಾತಾಡಿದರು. ವೀರ ಕಲ್ಕುಡ ತನ್ನ ಮನಸ್ಸಿನ ಆಸೆಯನ್ನು ತಂದೆಯ ಕೊಡೆ ಹೇಳಿದ.

"ಅಪ್ಪಾ, ನಿಮ್ಮ ಶಿಲ್ಪದ ಕೆಲಸಗಳನ್ನು ನಾನು ನೋಡಬೇಕು, ಕಲಿಯಬೇಕು"

ಶಂಭು ಕಲ್ಕುಡ ನಕ್ಕ." ನೀನಿನ್ನೂ ಚಿಕ್ಕವ, ನನ್ನ ಕೆಲಸವನ್ನು ಏನು ನೋಡಬಲ್ಲೆ? ಎಷ್ಟು ಕಲಿಯಬಲ್ಲೆ? ಮೆಚ್ಚದ ಅರಸರು ಮೆಚ್ಚಿದ್ದಾರೆ. ಎಂದೂ ಕೊಡದಿರುವ ಉಡುಗೊರೆ ಕೊಟ್ಟಿದ್ದಾರೆ" ಎಂದ.

"ಅದೇನಿದ್ದರೂ ನೀವು ಮಾಡಿದ ಶಿಲ್ಪಕಾರ್ಯವನ್ನು ನನಗೆ ನೋಡಲೇಬೇಕು" ಎಂದು ಒಂದೇ ಸವನೆ ಹಟ ಹಿಡಿದ ವೀರ ಕಲ್ಕುಡ. ಶಂಭು ಕಲ್ಕುಡನಿಗೆ ಒಪ್ಪಲೇಬೇಕಾಯಿತು. ತಂದೆ ಮಗ ಇಬ್ಬರೂ ಮತ್ತೆ ಬೆಳಗೊಳಕ್ಕೆ ಹೋದರು. ಗೋಮಟೇಶ್ವರನ ಸನ್ನಿಧಿಗೆ ಬಂದರು. ಆಗ ಇರುಳಾಗಿತ್ತು. ಪಂಚದೀವಟಿಗೆಯನ್ನು ಹೊತ್ತಿಸಿದರು. ಅದರ ಬೆಳಕಿನಲ್ಲಿ ತಂದೆಯ ಮಹಾ ಶಿಲ್ಪಕಾರ್ಯವನ್ನು ಮಗ ನೋಡಿದ. ಅವನ ಸೂಕ್ಷ್ಮದ ಕಣ್ಣಿಗೆ ಶಿಲ್ಪದಲ್ಲಿ ಬತ್ತದಷ್ಟು ಕೋರೆ ತೋರಿ ಬಂದಿತು. ಮನಸ್ಸಿಗೆ ಬೇಸರವೂ ಆಯಿತು. ಇಷ್ಟು ಮಹತ್ತಾದ ಶಿಲ್ಪದಲ್ಲಿ ಈ ಕೊರತೆ ಇರುವಂತಾಯಿತೇ ಎಂದು ಅಚ್ಚರಿಗೊಂಡ. ಹೇಳಿದರೆ ತಂದೆಯ ಮನಸ್ಸಿಗೆ ನೋವಾದೀತು, ಹೇಳದಿದ್ದರೆ ಮನಸ್ಸಿನ ಕೆಸರಿಕೆ ಹಾಗೆಯೇ ಉಳಿದೀತು ಎಂದು ವೀರನ ಮನಸ್ಸಿನಲ್ಲಿ ತಳುಮಳವಾಯಿತು ಇದ್ದುದನ್ನು ಇದ್ದಂತೆ ಹೇಳುವುದೇ ಒಳ್ಳೆಯದು ಎಂದು ಎಣಿಸಿದ.

"ಅಪ್ಪಾ, ನಾನೊಂದು ಮಾತು ಹೇಳುತ್ತೇನೆ, ಬೇಸರಿಸಬಾರದು. ಈ ಗೋಮಟ ಸ್ವಾಮಿಯ ಶಿಲ್ಪ ಒಂದು ದೊಡ್ಡ ಚೋದಿಗವೇ ಸೈ ! ಆದರೆ ನನ್ನ ಮನಸ್ಸಿಗೆ ಪೂರ್ತಿ ಸಮಾಧಾನ ಆಗಲಿಲ್ಲ" ಎಂದ ವೀರ ಕಲ್ಕುಡ.

ಶಂಭು ಕಲ್ಕುಡನಿಗೆ, ಕಾಲಿಗೆ ಕಸಕ್ಕನೆ ಮುಳ್ಳು ಕಂತಿದಂತಾಯಿತು. "ಯಾಕೆ ಸಮಾಧಾನ ಆಗಲಿಲ್ಲ ಮಗಾ?" ಎಂದು ಕೇಳಿದ.

"ಅಪ್ಪಾ, ಕೆಳಗಿಂದ ನೋಡುವವರಿಗೆ ಏನೂ ಕುಂದು ಕೊರತೆ ತೋರದೆ ಹೋದೀತು. ಮೂರ್ತಿಯಲ್ಲಿ ತಲೆ ಮುಖ್ಯ ತಾನೆ? ತಲೆಯ ಎಡಬಲ ಭಾಗಗಳು ಸಮಪ್ರಮಾಣದಲ್ಲಿಲ್ಲ; ಒಂದು

ನೂಲಿನಷ್ಟು ಹೆಚ್ಚು ಕಡಿಮೆ. ಇದೆ" ಎಂದು ಧೈರ್ಯ ಮಾಡಿ ಹೇಳಿದ ವೀರ ಕಲ್ಕುಡ.

ಶಂಭು ಕಲ್ಕುಡನಿಗೆ ಸಿಡಿಲು ಬಡಿದಂತಾಯಿತು. "ಅಯ್ಯೊ ಮಗನೆ, ಏನು ಹೇಳಿಬಿಟ್ಟೆ? ನಾನು ನಿರ್ಮಿಸಿದ ಮೂರ್ತಿಯಲ್ಲಿ ಕುಂದುಕಕೊರತೆ ಇದೆಯೋ? ಯಾವ ಮಾಯಕದಲ್ಲಿ ಈ ದೋಷ ನನ್ನ ಕಣ್ಣಿಗೆ ಬೀಳದೆ ಹೋಯಿತು? ನೂಲಿನಷ್ಟು ಕೋರೆಯಾದರೂ ನೀನು ತಿಳಿದುಬಿಟ್ಟೆಯಲ್ಲಾ? ನನ್ನಿಂದಲೂ ಗಟ್ಟಿಗನಾದೆ! ಆಗಲಿ! ಆದರೆ ಈ ವಿಚಾರವನ್ನು ಅರಸು ಅರಿತರೆ ನನ್ನನ್ನು ಆನೆಯ ಕಾಲಡಿಗೆ ಹಾಕಿಸಬಹುದು; ಕುದುರೆಯ ಚಾವಟಿಯಿಂದ ಹೊಡೆಯಿಸಬಹುದು; ಮಾನವನ್ನು ಕಳೆದುಕೊಂಡು ಬಾಳುವುದಕ್ಕಿಂತಲೂ ಸಾಯುವುದೇ ಮೇಲು!" ಎಂದು ಶಂಭು ಕಲ್ಕುಡ ಸಂಚಿಯಿಂದ ಮೊನೆಯಾದ ಉಳಿಯೊಂದನ್ನು ತೆಗೆದ; ತನ್ನ ಎದೆಗೆ ತಿವಿದುಕೊಂಡುಬಿಟ್ಟ! ತಾನೇ ಕೆತ್ತಿದ ಗೋಮಟೇಶನ ಬಿಂಬದ ಪಾದದೆಡೆಗೆ ಉರುಳಿದ. ಆ ಪಾದಕ್ಕೆ ಅವನ ಎದೆಯ ನೆತ್ತರಿನ ಅಭಿಷೇಕವಾಯಿತು! ಶಂಭು ಕಲ್ಕುಡ ಕಾಯ ಬಿಟ್ಟು ಕೈಲಾಸಕ್ಕೆ ಸಂದ.

"ಅಯ್ಯೋ ದೇವರೆ, ಛೇ, ಛೇ..." ಎಂದು ಒಟ್ಟಿಗೇ ಉದ್ಗರಿಸಿದರು ಕತೆ ಕೇಳುತ್ತಿದ್ದ ಮಕ್ಕಳು. ಅವರ ಮೋರೆ ಬಾಡಿತು.

ದು:ಖ ತುಂಬಿದ ಸ್ವರದಿಂದ ಕತೆಯನ್ನು ಮುಂದುವರಿಸಿದರು ಮಾಸ್ತರರು.

ನೆತ್ತರು ಚಿಮ್ಮುವ ತಂದೆಯ ಮೆಯ್ಯ ಮೇಲೆ ಬಿದ್ದು ಹೊರಳಾಡಿದ ವೀರ ಕಲ್ಕುಡ. ಅವನ ದುಃಖಕ್ಕೆ ಪಾರವೇ ಇರಲಿಲ್ಲ. "ಅಯ್ಯೋ ಅಪ್ಪಾ" ಇದೇನು ಮಾಡಿಕೊಂಡಿರಿ? ನಾನು ಯಾಕಾಗಿ ಕುಂದು ಕೋರೆಯನ್ನು ಎತ್ತಿ ಹೇಳಿದೆನೊ? ನಿಮ್ಮನ್ನು ಹುಡುಕಾಡಿಕೊಂಡು ಬಂದು ಇಲ್ಲಿ ಚಿತೆಗೇರಿಸಬೇಕಾಯಿತೆ? ತಂದೆಗೆ ಸಾವನ್ನು ತಂದ ಪಾಪಿಯಾದೆನಲ್ಲ ನಾನು?" ಎಂದು ಮಮ್ಮಲ ಮರುಗಿದ.

ತಂದೆಯ ಶವವನ್ನು ಚಿತೆಗೇರಿಸುವ ಕರ್ತವ್ಯವನ್ನು ಮಾಡಿದ ವೀರ ಕಲ್ಕುಡ. ಗೋಮಟ ಬಿಂಬದಲ್ಲಿದ್ದ ಒಂದಿಷ್ಟು ಕೋರೆಯನ್ನು ಯಾರೂ ಅರಿಯದಂತೆ ಸರಿಪಡಿಸಿದ. ತಂದೆಯ ಕೆಲಸದ

ಉಪಕರಣಗಳನ್ನು ಹಿಡಿದುಕೊಂಡ. ಉಳಿ, ಚಾಣ, ಸುತ್ತಿಗೆ, ಅಳೆಯುವ ಕೋಲು, ಲೆಕ್ಕದ ನೂಲುಗಳನ್ನು ತೆಗೆದುಕೊಂಡ. ಗಟ್ಟವಿಳಿದು ತುಳುಸೀಮೆಗೆ ಬಂದ. ತನ್ನ ಊರನ್ನು ಸೇರಿದ.

ಶಿಲ್ಪ ವಿದ್ಯೆಯಲ್ಲಿ ವೀರ ಕಲ್ಕುಡ ತಂದೆಯಿಂದಲೂ ಗಟ್ಟಿಗನೆಂದು ಹೆಸರಿಗೆ ಬಂದ. ಕಾರ್ಕಳದ ಭೈರವ ಅರಸ ಈ ಸುದ್ದಿ ಕೇಳಿದ. ತುಳುನಾಡಿನಲ್ಲಿ ಇದುವರೆಗೆ ಇಲ್ಲದ ಒಂದು ದೊಡ್ಡ ಕೆಲಸವನ್ನು ಮಾಡಿಸಬೇಕು, ಕಾರ್ಕಳದಲ್ಲಿ ಗೋಮಟೇಶ್ವರನ ಮೂರ್ತಿಯನ್ನು ಪ್ರತಿಷ್ಠಾಪಿಸಬೇಕು ಎಂಬುದು ಅವನ ಮನಸ್ಸಿನ ಅಭಿಲಾಷೆ. ವೀರ ಕಲ್ಕುಡನಿಗೆ ಅರಸ ಓಲೆ ಬರೆಸಿದ. ಅದನ್ನು ನೋಡಿ ವೀರ ಕಲ್ಕುಡ ಅರಸನ ಸನ್ನಿಧಿಗೆ ಬಂದ. ಅರಸನಿಗೆ ನಮಸ್ಕಾರ ಸಲ್ಲಿಸಿದ.

ಭೈರವ ಅರಸ ತನ್ನ ಮನಸ್ಸಿನ ಸಂಕಲ್ಪವನ್ನು ಹೇಳಿದ. "ವೀರ ಕಲ್ಕುಡ, ತಂದೆಯನ್ನು ಸೋಲಿಸಿದ ಮಗನಂತೆ ನೀನು. ಶಿಲ್ಪ ಕಲೆಯ ನಾಜೂಕಿನಲ್ಲಿ ನಿನಗೆ ಸರಿಯಾದವನು ಇಲ್ಲವಂತೆ. ನಮ್ಮ ಕಾರ್ಕಳ ಸೀಮೆಯಲ್ಲಿ ದೊಡ್ಡದೊಂದು ಶಿಲ್ಪಕಾರ್ಯ ಆಗಬೇಕು. ನಾಲ್ಕು ಮುಖಗಳ ಬಸದಿ ಆಗಬೇಕು. ಬೆಟ್ಟದ ಮೇಲೆ ಗೋಮಟಸ್ವಾಮಿಯ ದೊಡ್ಡ ಮೂರ್ತಿಯನ್ನು ಕೆತ್ತಿ ನಿಲ್ಲಿಸಬೇಕು. ಈ ಕೆಲಸ ನಿನ್ನಿಂದಲೇ ಆಗಬೇಕು."

"ಅರಸುಗಳ ಚಿತ್ತ" ಎಂದು ವೀರಕಲ್ಕುಡ ಶಿಲ್ಪಕಾರ್ಯವನ್ನು ಒಪ್ಪಿಕೊಂಡ. ಪಡಿಯಕ್ಕಿಯನ್ನು ಸ್ವೀಕರಿಸಿದ. ಶುಭ ದಿನ, ಗಳಿಗೆ ನೋಡಿ ಕೆಲಸವನ್ನು ಮೊದಲು ಮಾಡಿದ. ನಾಲ್ಕು ಮುಖಗಳ ಬಸದಿಯನ್ನು ಕಟ್ಟಿದ. ಗೋಮಟೇಶ್ವರನ ಮೂರ್ತಿಯನ್ನೂ ಕೆತ್ತಿದ. ಕಾರ್ಕಳ ಸೀಮೆಯ ಐದು ಸಾವಿರಾಳು ಸೇರಿದರು. ಎಷ್ಟು ಹೆಣಗಿದರೂ ಗೋಮಟ ಮೂರ್ತಿಯನ್ನು ನೆಟ್ಟಗೆ ನಿಲ್ಲಿಸಲು ಸಾಧ್ಯವಾಗಲಿಲ್ಲ. ವೀರ ಕಲ್ಕುಡ ಹಾಸುಗಲ್ಲಿನ ಕೀಲು ಕೊಟ್ಟು ಕುಶಲತೆಯಿಂದ ಮೂರ್ತಿಯನ್ನು ನೆಟ್ಟಗೆ ನಿಲ್ಲಿಸಿದ. ಸರ್ವರೂ ವೀರಕಲ್ಕುಡನನ್ನು ಬಾಯಿತುಂಬಾ ಕೊಂಡಾಡಿದರು.

ವೀರ ಕಲ್ಕುಡ ಅರಸನಲ್ಲಿ ಅರಿಕೆ ಮಾಡಿದ: "ಮಹಾಸ್ವಾಮಿ, ಇಂದಿಗೆ ನಾನು ಮನೆಬಿಟ್ಟು ಹನ್ನೆರಡು ವರ್ಷ ಆಯಿತು. ಊರಿಗೆ ಹೋಗಲು ನನಗೆ ಅಪ್ಪಣೆ ಆಗಬೇಕು."

"ಇದೀಗ ಸಾಯಂಕಾಲವಾಯಿತು. ಬೈಗಿನ ಫಲಾಹಾರದ ಹೊತ್ತಾಯಿತು. ನಾಳೆ ಹೊತ್ತಾರೆ ಬಾ. ನಿನಗೆ ಕೊಡಬೇಕಾದ ಉಡುಗೊರೆಗಳನ್ನು ಕೊಡುತ್ತೇನೆ" - ಎಂದ ಅರಸ.

ಅದರಂತೆ ಮರುದಿನ ಹೋದ ವೀರಕಲ್ಕುಡ. ಅರಸನ ಮನಸ್ಸು ಬದಲಾಗಿ ಹೋಗಿತ್ತು." ಕಲ್ಕುಡ ಬೇರೆ ರಾಜ್ಯದಲ್ಲಿ ಹೀಗಿರುವ ಶಿಲ್ಪಕಾರ್ಯ ಮಾಡಬಾರದು"- ಎಂದು ಎಣಿಸಿದ ಅರಸ.

ವೀರ ಕಲ್ಕುಡನ ಕೈಗೆ ಬಂಗಾರದ ಬಳೆ ತೊಡಿಸಿದ; ಬಲಕೈ ಕಡಿಸಿದ. ಕಾಲಿಗೆ ಕಡವು ತೊಡಿಸಿದ; ಎಡಗಾಲು ತುಂಡರಿಸಿದ. ಕಡಿದ ಕೈಗೆ ನಳಿಗೆ ಹಾಕಿಸಿದ; ಕಾಲಿಗೆ ಅಂಡೆ ಹಾಕಿಸಿದ.

"ಛೇ... ಛೇ.... ಹೀಗೂ ಇದೆಯೇ? ಅರಸನ ಕಣ್ಣಿನಲ್ಲಿ ನೆತ್ತರಿನ ಪಸೆಯಿಲ್ಲ"- ಎಂದ ರವಿ. ಉಳಿದವರಿಗೂ ಅರಸನ ಮೇಲೆ ದೊಡ್ಡ ಕೋಪ ಬಂತು. ಆದರೆ ಮಾಡುವುದೇನು?

"ತನ್ನ ಕೆಲಸ ಆದ ಮೇಲೆ ಇಂಥ ಘಾತಕ ಮಾಡಿದ ಅರಸ. ಇಂಥವರು ಎಷ್ಟೋ ಜನ ಇದ್ದಾರೆ ಹೊರಗೆ ನಗೆ, ಒಳಗೆ ದಗೆ!"- ಎಂದರು ಮಾಸ್ತರರು. ಕತೆ ಮುಂದುವರಿಯಿತು.

ಗೋಮಟೇಶ್ವರನಿಗೆ ವೈಭವದ ಮಸ್ತಕಾಭಿಷೇಕ ನಡೆಯಿತು. ಕಾರ್ಕಳ ಸೀಮೆಯ ಮಂದಿ ಉತ್ಸವದ ಸಂಭ್ರಮದಲ್ಲಿ ನಲಿದಾಡಿದರು. ಆದರೆ ಗೋಮಟಮೂರ್ತಿಯನ್ನು ಕೆತ್ತಿದ ವೀರಕಲ್ಕುಡ ಕೈ ಕಾಲು ಕಳೆದುಕೊಂಡು ತಡೆಯಲಾಗದ ನೋವಿನಿಂದ ನರಳಿದ. ಈ ಕಾರ್ಕಳದ ನೀರು ನಂಜಾಯಿತೆಂದು ಮರುಗಿದ.

ಆ ಕಾಲದಲ್ಲಿ ವೇಣೂರನ್ನು ತಿಮ್ಮಣ್ಣಾಜಿಲನೆಂಬ ಅರಸ ಆಳುತ್ತಿದ್ದ. ಕಾರ್ಕಳದಲ್ಲಿ ನಡೆದ ಎಲ್ಲಾ ವಿಷಯಗಳು ಅವನ ಕಿವಿಗೆ ಬಿದ್ದವು. ತನ್ನ ಸೀಮೆಯಲ್ಲೂ ಒಂದು ಗೋಮಟಮೂರ್ತಿಯನ್ನು ಪ್ರತಿಷ್ಠಾಪಿಸುವ ಇಚ್ಛೆ ಅವನಿಗೂ ಉಂಟಾಯಿತು. ವೀರಕಲ್ಕುಡನನ್ನು ಹುಡುಕಿ ಕರೆತರಲು ಗುಟ್ಟಿನಲ್ಲಿ ಆಳುಗಳನ್ನು ಅಟ್ಟಿದ. ಅವರು ವೀರ ಕಲ್ಕುಡನನ್ನು ಹುಡುಕಿ, ಯಾರೂ ತಿಳಿಯದಂತೆ ಅವನನ್ನು ವೇಣೂರಿಗೆ ಕರೆದುಕೊಂಡು ಬಂದರು.

ವೀರ ಕಲ್ಕುಡನ ದುರವಸ್ಥೆಯನ್ನು ಕಂಡು ತಿಮ್ಮಣ್ಣಾಜಿಲನ ಮನಸ್ಸು ಕರಗಿತು. ಕಾರ್ಕಳದ ಭೈರವರಸನ ಮೇಲೆ ಕೋಪ ಕೆದರಿತು. "ಕಾರ್ಕಳದ ಕೀರ್ತಿಯನ್ನು ಬೆಳಗಿಸಿಕೊಟ್ಟ ವೀರ ಕಲ್ಕುಡನಿಗೆ ಭೈರವರಸ ಇಂಥಾ 'ಉಡುಗೊರೆ' ಕೊಟ್ಟನಲ್ಲಾ" ಎಂದು ಬಹುವಾಗಿ ಬೇಸರಪಟ್ಟ. ವೀರ ಕಲ್ಕುಡನ ಕೈ ಕಾಲಿನ ಗಾಯಗಳಿಗೆ ನಿಪುಣರಾದ ವೈದ್ಯರಿಂದ ಮದ್ದು ಮಾಡಿಸಿದ. ಗಾಯ ಕೂಡುತ್ತಾ ಬಂತು.

ಒಂದು ದಿನ ಅರಸ ವೀರಕಲ್ಕುಡನನ್ನು ತನ್ನ ಬಳಿಗೆ ಕರೆಯಿಸಿದ. ಅರಮನೆಯ ಬಣ್ಣದ ಚಾವಡಿಗೆ ಬಂದ ಕಲ್ಕುಡ ಅರಸನಿಗೆ ಮಣಿದು ನಿಂತ.

"ಕಲ್ಕುಡಾ, ನಮ್ಮ ವೇಣೂರು ಸೀಮೆಯಲ್ಲಿ ಗೋಮಟೇಶ್ವರನ ಒಂದು ವಿಗ್ರಹ ಆಗಬೇಕು. ಅದು ನಿನ್ನ ಕೈಯಿಂದಲೇ ನೆರವೇರಬೇಕು. ನಮ್ಮನ್ನು ಕಾರ್ಕಳದ ಅರಸನ ಹಾಗೆಂದು ಮಾತ್ರ ತಿಳಿಯಬೇಡ."- ಎಂದ ತಿಮ್ಮಣ್ಣಾಜಿಲ.

ವೀರ ಕಲ್ಕುಡನೆಂದ. "ಕೆಲಸವೇನೋ ಮಾಡಬಹುದಾಗಿತ್ತು. ಆದರೆ ಕಾಲು ಇದ್ದಲ್ಲಿ ಕೈ ಇಲ್ಲ, ಕೈ ಇದ್ದಲ್ಲಿ ಕಾಲು ಇಲ್ಲ. ಈ ಒಕ್ಕೈಯಿಂದ ಹೇಗೆ ಕೆಲಸ ಮಾಡಲಿ?"

"ನಿನ್ನ ಜಾತಿ ಬಳಗದವರನ್ನು ಕರೆಯಿಸುತ್ತೇನೆ ನೀನು ಶಿಲ್ಪ ಕಾರ್ಯದ ನೋಟ ಹೇಳಿಕೊಡುತ್ತಾ ಮೇಲ್ವಿಚಾರಣೆ ನೋಡಿಕೊಂಡರೆ ಸಾಕು"

ಅರಸನ ನುಡಿಗೆ ವೀರಕಲ್ಕುಡ ಹೀಗೆಂದ:

"ಬೇರೆಯ ಜನಗಳಿಗೆ ಕೆಲಸದ ಮರ್ಮವನ್ನು ಹೇಳಿಕೊಡುವುದಕ್ಕಿಂತ ನಾನೇ ಕೆಲಸಗೈಯಬಲ್ಲೆ. ಈ ಮುಂಡು ಕೈಗೆ ಕೊಡತಿಯನ್ನು ಕಟ್ಟಿ ಮೂರ್ತಿಯನ್ನು ಕೆತ್ತುತ್ತೇನೆ. ಒಂದು ಕೈಯಾದರೂ ಉಳಿದಿದೆಯಲ್ಲ?"

ಅರಸನಿಗೆ ಸಮಾಧಾನವಾಯಿತು. "ಆಗಲಪ್ಪಾ ಕಲ್ಕುಡ. ಬಲು ದೊಡ್ಡ ಕಾರ್ಯ ಚೆನ್ನಾಗಿ ಸಾಗಲಿ!" ಎಂದು ಅರಸು ವೀರ ಕಲ್ಕುಡನನ್ನು ಬಿಡಾರಕ್ಕೆ ಕಳುಹಿಸಿಕೊಟ್ಟ ಮೂರ್ತಿಗಾಗಿ ಪ್ರಶಸ್ತವಾದ ಶಿಲೆಯನ್ನು ಶೋಧಿಸಿದರು. ಒಳ್ಳೆಯ ದಿನವನ್ನು ನೋಡಿದರು. ವೀರ ಕಲ್ಕುಡ ನಾಲ್ಕು ದಿಕ್ಕುಗಳ ದೈವದೇವರುಗಳನ್ನು ಸ್ತುತಿಸಿದ. ಶಿಲ್ಪ ಕಾರ್ಯವನ್ನು ಪ್ರಾರಂಭ ಮಾಡಿದ. ಮೈಯನ್ನೂ ಮನಸ್ಸನ್ನೂ ಮಡಿಮಾಡಿಕೊಂಡು ಒಂದೇ ಮನಸ್ಸಿನಿಂದ ಕೆಲಸವನ್ನು ಮುಂದುವರಿಸಿದ. ಕಲ್ಲಿನ ಒಡಲಿನಿಂದ ಗೋಮಟಮೂರ್ತಿ ಮೂಡುತ್ತಾ ಬಂತು. ಒಂದು ಕೈ ಒಂದು ಕಾಲಿನಲ್ಲಿ ವೀರ ಕಲ್ಕುಡ ಈ ಅದ್ಭುತ ಕಾರ್ಯ ನೆರವೇರಿಸಿದ. ಈ ಚೋದ್ಯವನ್ನು ಕಂಡು ಅರಸ ಬೆಕ್ಕಸ ಹೊಂದಿದ. ಇಂಥ ಶ್ರೇಷ್ಠ ಶಿಲ್ಪಿ ಬೇರೆ ಯಾರೂ ಇಲ್ಲವೆಂದು ಮನದಲ್ಲೆ ಎಣಿಸಿ ಮೆಚ್ಚಿಕೊಂಡ.

ವೀರ ಕಲ್ಕುಡ ಗೋಮಟಮೂರ್ತಿಯ ತಲೆಯ ಭಾಗವನ್ನು ಕೆತ್ತುತ್ತಿದ್ದಾಗ ಕಲ್ಲಿನ ಚೂರೊಂದು ಸಿಡಿದು ಕಾರ್ಕಳಕ್ಕೆ ಹೋಗಿ ಬಿತ್ತಂತೆ! ರಾಜಾಂಗಣಕ್ಕೆ ಬಂದು ಬಿದ್ದ ಕಲ್ಲಿನ ತುಂಡನ್ನು ಭೈರವರಸ ನೋಡಿದನಂತೆ. ತನ್ನ ರಾಜ್ಯದಲ್ಲಿ ಗೋಮಟ ಶಿಲ್ಪವನ್ನು ನಿರ್ಮಿಸಿದ ವೀರ ಕಲ್ಕುಡ

ಬೇರೆ ಸೀಮೆಯಲ್ಲಿ ಶಿಲ್ಪಕಾರ್ಯ ಮಾಡುತ್ತಾನೆಂದು ಅರಸನಿಗೆ ಗೊತ್ತಾಯಿತು. ಅವನ ಮನಸ್ಸಿನಲ್ಲಿ ಮತ್ಸರ ಕುದಿಯಿತು. ಕೋಪದಿಂದ ಆತ ತುಟಿ ಕಚ್ಚಿಕೊಂಡ.

"ಕಲ್ಲಿನ ಚೂರು ಅಷ್ಟು ದೂರ ಸಿಡಿದು ಬಿದ್ದಿತೇ?" ಎಂದು ಸಂಶಯದ ರಾಗ ಎಳೆದ ಗೋಪಿ.

ಮಾಸ್ತರರು ನಕ್ಕರು. "ಕತೆಯಲ್ಲಿ ಬರುವ ಸಂಗತಿಗಳಲ್ಲವೆ? ಅವೆಲ್ಲಾ ಅವೇ ರೂಪದಲ್ಲಿ ನಡೆದುವೆಂದು ಅರ್ಥವಲ್ಲ. ಅದು ಕತೆ ಹೇಳುವ ಒಂದು ರೀತಿ! ವೇಣೂರಿನಿಂದ ಕಾರ್ಕಳಕ್ಕೆ ಕಲ್ಲಿನ ತುಂಡು ಹಾರಿತೆಂದರೆ ಏನರ್ಥ? ವೇಣೂರಿನಲ್ಲಿ ಗೋಮಟಸ್ವಾಮಿಯ ಬಿಂಬ ಕೆತ್ತಿಸುವ ಸುದ್ದಿ ರಪಕ್ಕನೆ ಕಾರ್ಕಳಕ್ಕೆ ಮುಟ್ಟಿತು; ಅದು ಅರಸನ ಪಾಲಿಗೆ ಕಲ್ಲಿನ ಹೊಡೆತದಂತಿತ್ತು. ಎಂಬುದು ಅದರ ತಾತ್ಪರ್ಯ.

"ಹಾಂ, ಅದಾದರೆ ಸರಿ !"- ಗೋಪಿಗೆ ಸಮಾಧಾನವಾಯಿತು. ಮಾಸ್ತರರು ಮುಂದುವರಿಸಿದರು: " ವೀರ ಕಲ್ಕುಡನನ್ನು ಅಂದೇ ಕೊಲ್ಲಿಸಿಬಿಡಬೇಕಿತ್ತು!" - ಎಂದು ಹಲ್ಲು ಕಡಿದ ಭೈರವರಸ. ಇನ್ನಾದರೂ ಅವನನ್ನು ಉಪಾಯದಲ್ಲಿ ಕೊಲ್ಲಿಸದೆ ಬಿಡಬಾರದೆಂದು ಮನಸ್ಸಿನಲ್ಲೆ ತೀರ್ಮಾನಿಸಿಕೊಂಡ.

ಕೆಲ್ಲತ್ತ ಮಾರ್ನಾಡಿನಲ್ಲಿ ವೀರ ಕಲ್ಕುಡನ ಒಡಹುಟ್ಟಿದ ತಂಗಿ ಕಾಳಮ್ಮ ಇದ್ದಳು. ಅವಳ ಮನಸ್ಸಿಗೆ ಏನೋ ಒಂದು ವಿಧದ ವ್ಯಥೆ. ಹೇಳಲಾಗದ ಉಮ್ಮಳ. ಸೋದರನನ್ನು ನೋಡದೆ ಹನ್ನೆರಡು ವರ್ಷ ಕಳೆದಿತ್ತು. "ಅಣ್ಣನನ್ನು ನೋಡದೆ ಕಣ್ಣು ಕಾತರಿಸುತ್ತದೆ. ಮನಸ್ಸು ತಳಮಳಿಸುತ್ತಿದೆ "ನಾನೇ ಅಣ್ಣನನ್ನು ಹುಡುಕಿ ಕರೆದುಕೊಂಡು ಬರುತ್ತೇನೆ" ಎಂದು ಆಲೋಚಿಸಿದಳು. ಅಣ್ಣನಿಗೆಂದು ಉಣಿಸು ತಿನಿಸಿನ ತಯಾರಿ ನಡೆಸಿದಳು. ಅಪ್ಪ, ಕಡಬು, ಬಣ್ಣದ ಕಾಯೊಡೆ, ಎಣ್ಣೆಯ ಚಕ್ಕುಲಿಗಳನ್ನು ಮಾಡಿದಳು. ಮೂಡೆಯಲ್ಲಿ ಅರಳು, ಹಾಡದಲ್ಲಿ ತುಪ್ಪ, ಅವಲಕ್ಕಿ, ಬೆಲ್ಲ ಇತ್ಯಾದಿಗಳನ್ನು ಒಟ್ಟು ಮಾಡಿದಳು. ಎಲ್ಲವನ್ನು ಓರಣವಾಗಿ ಕಟ್ಟಿಕೊಂಡು ಕಾರ್ಕಳಕ್ಕೆಂದು ಹೊರಟಳು.

ಆನೆ ಕಟ್ಟುವ ಅಶ್ವತ್ಥ, ಕುದುರೆ ಕಟ್ಟುವ ಕಿರುಗೋಳಿ ದಾಟಿದಳು. ಅಡ್ಡವಾಗಿದ್ದ ಹೊಳೆ,

ನೀಟವಾಗಿದ್ದ ಗುಡ್ಡ, ತಲೆಹೋದ ಶಾಂತಿಯ ಮರ ಕಳೆದು ಮುಂದೆ ಹೋದಳು. ಅಲ್ಲಲ್ಲಿ ವಿಚಾರಿಸಿಕೊಂಡು ಹೇಗೂ ಕಾರ್ಕಳಕ್ಕೆ ಮುಟ್ಟಿದಳು. ಅಲ್ಲಿ ಅಣ್ಣನಿಗೆ ಭೈರವರಸು ಕೊಡಬಾರದ ಉಡುಗೊರೆ ಕೊಟ್ಟ ವಿಚಾರ ತಿಳಿಯಿತು. ಅಣ್ಣನ ಕೈಕಾಲು ಕತ್ತರಿಸಿದ ಸುದ್ದಿ ಕೇಳಿ ತಲೆತಿರುಗಿ ಬಿದ್ದಳು. ಯಾರೋ ನೋಡಿ ಸ್ವಲ್ಪ ನೀರು ಸಿಂಪಡಿಸಿ ಎಚ್ಚರಗೊಳಿಸಿದರು. "ನನ್ನ ಅಣ್ಣನೆಲ್ಲಿ?" ಎಂದು ಕಂಡವರಲ್ಲಿ ಕೇಳಿದಳು. "ಅವನು ವೇಣೂರಿಗೆ ಹೋದ ಸುದ್ದಿಯಿದೆ" ಎಂದು ಕೆಲವರೆಂದರು. ಕಾಳಮ್ಮ ವೇಣೂರು ಕಡೆಗೆ ಹೊರಟಳು. ಕಾರ್ಕಳದ ಅರಸ ಮಾಡಿದ ಅನ್ಯಾಯವನ್ನು ಎಣಿಸಿ ಕೆಂಡವಾದಳು. ಪ್ರತೀಕಾರ ಮಾಡದೆ ಬಿಡನೆಂದು ದೃಢಮಾಡಿಕೊಂಡಳು. ದಾರಿಯನ್ನು ಕೇಳಿಕೊಂಡು ಏಳುತ್ತಾ ಬೀಳುತ್ತಾ ವೇಣೂರಿಗೆ ಬಂದು ಮುಟ್ಟಿದಳು.

ವೀರ ಕಲ್ಕುಡ ಹಿಡಿದ ಕೆಲಸ ಮುಗಿಯುತ್ತ ಬಂದಿತ್ತು. ಬಂಟಕಲ್ಲಿನ ಮೇಲೆ ತನ್ನ ಪ್ರತಿರೂಪವೊಂದನ್ನು ಕೆತ್ತುತ್ತಾ ಇದ್ದ. ದೂರದಿಂದ ಕಾಳಮ್ಮ ಸೋದರನನ್ನು ನೋಡಿದಳು. ಶೋಕವನ್ನು ತಡೆಯಲಾರದೆ ಗಟ್ಟಿಯಾಗಿ ಅಳುತ್ತಾ ಓಡಿ ಬಂದಳು. "ಓ ಅಣ್ಣಾ! ಎಂದು ಬಿಕ್ಕುತ್ತಾ ವೀರನ ಮಡಿಲಿಗೆ ಬಂದು ಬಿದ್ದಳು. "ಬಂದೆಯಾ ಕಾಳಮ್ಮ?"- ಎಂದು ಅಕ್ಕರೆಯಿಂದ ವಿಚಾರಿಸಿದ ವೀರ ಕಲ್ಕುಡ. ಅವನ ಕಣ್ಣಲ್ಲಿ ಕಂಬನಿ ತುಳುಕಿತು.

" ನಿನ್ನ ಕೈ ಏನಾಯಿತಣ್ಣಾ? ಕಾಲು ಏನಾಯಿತಣ್ಣಾ? ಯಾರು ಮುನಿದರಣ್ಣಾ ನಿನಗೆ?"- ಕಣ್ಣೀರಿನಲ್ಲಿ ಜಳಕ ಹೊಂದಿದ ಕಾಳಮ್ಮ ಕೇಳಿದಳು.

"ಕದ್ದುದರಿಂದ ಅಲ್ಲ ಕಾಳಮ್ಮ, ಸುಳ್ಳು ಹೇಳಿದ್ದರಿಂದ ಅಲ್ಲ; ಕಾರ್ಕಳದಲ್ಲಿ ಯಾರೂ ಮಾಡದ ಶಿಲ್ಪ ಕಾರ್ಯ ಮಾಡಿದೆ; ಯಾರಿಗೂ ಕೊಡದ ಉಡುಗೊರೆ ಕೊಟ್ಟರು ಕಾರ್ಕಳದ ಅರಸರು"

ಕತೆ ಕೇಳುತ್ತಲಿದ್ದ ಮಕ್ಕಳಿಗೆ ಕಣ್ಣಿನಲ್ಲಿ ನೀರು ಒಸರಿತು ಮಾಸ್ತರರೂ ಕಂಬನಿ ಒರಸಿಕೊಂಡರು.

"ಯಾಕೆ ಹೀಗೆ ಮಾಡಿದರು ಅರಸು?"- ಎಂದು ಕೇಳಿದಳು ಕಾಳಮ್ಮ.

" ತನ್ನ ಸೀಮೆಯಲ್ಲಿ ಮಾಡಿಸಿದಂಥ ಕೆಲಸಕ್ಕೆ ಪ್ರತಿಯಾಗಿ ಬೇರೆಯವರು ಬೇರೆ ಕಡೆ ಅಂಥ ಕೆಲಸ ಮಾಡಬಾರದು ಎಂದು ನನ್ನ ಕೈ ಕಾಲು ಕಡಿಸಿದರು" ಎಂದ ವೀರ ಕಲ್ಕುಡ.

ಕಾಳಮ್ಮ ಅಣ್ಣನ ಮಡಿಲಿನಿಂದ ತಟ್ಟನೆ ಎದ್ದಳು. ಅವಳು ಕಣ್ಣಿನಿಂದ ಕೆಂಗಿಡಿ ಹಾರಿದಂತೆ ತೋರಿತು. "ಅಣ್ಣಾ, ಕಾರ್ಕಳದ ಅರಸ ನಿನ್ನ ಕಾಯಕ್ಕೆ ಮುನಿದ. ನಾವು ಮಾಯದಲ್ಲಾದರೂ ಹೆಣಗಬೇಕು. ಅವನ ಹೊಗೆ ನೋಡದೆ ಬಿಡಬಾರದು. ಒಬ್ಬಾಕೆ ತಾಯಿಯ ಬಸಿರಲ್ಲಿ ಒಟ್ಟಿಗೇ ಹುಟ್ಟಿದವರು ನಾವು ಈಗ ಒಟ್ಟಿಗೇ ಕಾಯ ಬಿಟ್ಟು ಮಾಯದಲ್ಲಿ ಕಾರ್ಕಳಕ್ಕೆ ಹೋಗುವ" ಎಂದಳು.

" ಹಾಗೇ ಆಗಲಿ"- ಎಂದು ಸಮ್ಮತಿಸಿದ ವೀರ ಕಲ್ಕುಡ. ತನ್ನ ಶಿಲ್ಪದ ಸಲಕರಣೆಗಳನ್ನು ಅಂಗಣಕ್ಕೆ ಇಕ್ಕಿದ. ಕಾಳಮ್ಮ ತನ್ನ ಒಡವೆ ವಸ್ತುಗಳನ್ನು ಅಂಗಣಕ್ಕೆ ಎಸೆದಳು. ಕತ್ತಲಾಗುತ್ತ

ಬರುತ್ತಿತ್ತು. ಪಂಚ ದೀವಟಿಗೆ ಹಿಡಿದುಕೊಂಡು ಇಬ್ಬರೂ ದೇವರ ಅಂಗಣಕ್ಕೆ ಮೂರು ಸುತ್ತು ಬಲ ಎಂದರು. ದಂಬೆ ಕಲ್ಲಿಗೆ ಉಳಿ ಊರಿದರು. "ದೇವರೆ ನಮ್ಮನ್ನು ಮಾಯಕ ಮಾಡಿರಿ" ಎಂದು ಬೇಡಿ ಕೊಂಡರು ಕಾಯ ಬಿಟ್ಟು ಮಾಯಕ್ಕೆ ಸಂದರು.

"ಮಾಯಕ ಎಂದರೆ ಏನು?"- ಕೇಳಿದಳು ಶಶಿ.

" ಮಾಯಕ ಎಂದರೆ ಕಣ್ಣಿಗೆ ಕಾಣದೆ ಹೋಗುವಿಕೆ. ಕಾಳಮ್ಮ ಕಲ್ಕುಡರು ತಮ್ಮ ಜೀವ ಕಳೆದುಕೊಂಡರು ಎಂದರ್ಥ. ಹೀಗೆ ದೇವಸ್ಥಾನದ ಅಂಗಣದಲ್ಲಿ ಮಾಯಕ ಹೊಂದಿದ ಅಣ್ಣ ತಂಗಿಯರು ದೈವಗಳಾದರು. ಬಡಗು ಗಂಗೆ, ತೆಂಕು ಕಾವೇರಿ ನದಿಗಳಲ್ಲಿ ಮಿಂದು ಶುದ್ಧವಾದರು. ತಿರುಪತಿ ತಿಮ್ಮಪ್ಪ ದೇವರಲ್ಲಿ ವರ ಬೇಡಿದರು. ಭೈರವರಸನಲ್ಲಿ ಹಗೆ ಸಾಧಿಸಲು ಕಾರ್ಕಳ ಸೀಮೆಗೆ ಹೊಕ್ಕರು.

ಅರಸನ ಅರಮನೆಗೆ ಬಂದರು. ಬಡಗು ಭಾಗದ ಗೋಪುರಕ್ಕೆ ಹೊಕ್ಕರು. ತೆಂಕಿನ ಅಗ್ರಸಾಲೆ ದಾಟಿದರು. ಕೋಟೆ ಪೇಟೆಗಳಿಗೆ ಕೊಳ್ಳಿಯಿಕ್ಕಿದರು. ಕಲ್ಲಿನ ಮಳೆ, ಕೆಂಡದ ರಾಶಿ ಸುರಿಸಿದರು. ಅರಸನ ಹಾಸಿಗೆಗೆ ಬೆಂಕಿ ಸೋಂಕಿಸಿದರು. ಕರಡಿಗೆಯ ಬಂಗಾರವನ್ನು ಅಡಗಿಸಿದರು. ಪೆಟ್ಟಿಗೆಯ ಒಳಗೆ ಇದ್ದ ಪಟ್ಟೆ ಸೀರೆಯನ್ನು ಬೂದಿ ಮಾಡಿದರು. ಪಲ್ಲಕಿಗೆ ಮಣ್ಣು ಸುರಿದರು. ಅರಸನ ಅಬ್ಬೆಯನ್ನು ನೀರೊಳಗೆ ಮುಳುಗಿಸಿಟ್ಟರು. ನಿದ್ರಿಸಿದ್ದ ಪಟ್ಟದ ರಾಣಿಯನ್ನು ಬಾಕಿಮಾರು ಗದ್ದೆಗೆ ಬಿಸಾಡಿದರು. ಅರಸನ ಕಣ್ಣಿಗೆ ಹೆದರಿಕೆ ಬಿತ್ತುವ ಕನಸು ಕಟ್ಟಿಸಿದರು. ಇರುಳಲ್ಲಿ ಕಾಣಿಸಿಕೊಂಡು, ಹಗಲಲ್ಲಿ ಕಾಣಿಸದೆ ಸುಳಿದಾಡಿದರು.

ಇಡೀ ಕಾರ್ಕಳದ ಊರಲ್ಲಿಯೇ ಗಂಡಸರ ಬೊಬ್ಬೆ, ಹೆಂಗಸರ ಚೀರಾಟ ಎದ್ದಿತು. ಅರಸನ ಒಡಲಲ್ಲಿ ದೊಡ್ಡ ತಳಮಳ ಉಂಟಾಯಿತು. ಇಂಥ ಚೋದ್ಯದ ಸಂಗತಿಗಳು ನಡೆದರೆ ಜ್ಯೋತಿಷ್ಯ ಪ್ರಶ್ನೆಯನ್ನು ಕೇಳುವುದು ವಾಡಿಕೆ. ಹಾಗೆಯೇ ನಿಮಿತ್ತ ನೋಡುವ ಬಲ್ಲಾಯನನ್ನು ಅರಸ ಕರೆಯಿಸಿದ.

ನಿಮಿತ್ತ ನೋಡಿದ ಬಲ್ಯಾಯ, 'ಇದು ದೈವಗಳ ಕಾರಣಿಕ' ಎಂದ; "ಕಾಳಮ್ಮ ಕಲ್ಕುಡರು ಭೂತಗಳಾಗಿ ಕಾರ್ಕಳಕ್ಕೆ ನುಗ್ಗಿದ್ದಾರೆ" ಎಂದು ವಿವರಿಸಿದ.

ಇದನ್ನು ಕೇಳಿದ ಅರಸ ಬೆಕ್ಕಸ ಹೊಂದಿದ: ಆತ ತುಂಬಾ ಭೀತನಾದ. ಮಂತ್ರವಾದಿಗಳು ಭೂತಗಳನ್ನು ಕೈವಶ ಮಾಡುತ್ತಾರೆಂಬ ನಂಬಿಕೆ ಇದೆ. ನಾಲ್ಕೂ ಕಡೆಗಳಲ್ಲಿದ್ದ ಮಂತ್ರವಾದಿಗಳಿಗೆ ಅರಸ ಓಲೆಗಳನ್ನು ಅಟ್ಟಿದ. ಮಂತ್ರವಾದಿಗಳು ಬಂದು ಮಂತ್ರ ತಂತ್ರ ವಶೀಕರಣ ಮಾಡಲು ಯತ್ನಿಸಿದರು. ಏನು ಮಾಡಿದರೂ ದೈವಗಳು ಅವರ ಸ್ವಾಧೀನಕ್ಕೆ ಬರಲಿಲ್ಲ. ಅವುಗಳ ಉಪಟಳ ಮತ್ತಷ್ಟು ಹೆಚ್ಚಾಯಿತು. ಅದರೊಂದಿಗೆ ಅರಸನ ಚಿಂತೆಯೂ ಬಲಿಯಿತು. ದೈವಗಳೊಡನೆ ಮತ್ತೆ ಮತ್ತೆ ಕ್ಷಮೆ ಬೇಡಿಕೊಂಡ.

ಆ ಕಾಲದಲ್ಲಿ ಉಬಾರು (ಉಪ್ಪಿನಂಗಡಿ) ಎಂಬಲ್ಲಿ ವೈಲಾಯ ಎಂಬ ದೊಡ್ಡ ಮಂತ್ರವಾದಿ ಇದ್ದ. ಅವನಲ್ಲಿಗೆ ಅರಸ ಓಲೆಯನ್ನು ಕೊಟ್ಟು ಅಳನ್ನಟ್ಟಿದ. ವೈಲಾಯ ಓಲೆಯನ್ನು ಕಂಡು ಮಂತ್ರವಾದದ ಸನ್ನಾಹದೊಂದಿಗೆ ಕಾರ್ಕಳಕ್ಕೆ ಹೊರಟ.

ಉಬಾರು ಹೊಳೆ ದಾಟುವಾಗ ಭೂತಗಳು ಕಣ್ಣಿಗೆ ಕಾಣಿಸದೆ ವೈಲಾಯನನ್ನು ಬಗೆಬಗೆಯಲ್ಲಿ ಹೆದರಿಸಿದವು. ವೈಲಾಯ ಕೈ ಜೋಡಿಸಿ ಭೂತಗಳಲ್ಲಿ ಅರಿಕೆ ಮಾಡಿಕೊಂಡ:

"ಸ್ವಾಮೀ ದೈವಗಳೇ, ನೀವು ಬಹುದೊಡ್ಡ ಮಾಯಗಾರರು. ನನ್ನ ಮಂತ್ರವಾದದ ಮರ್ಯಾದೆ ಉಳಿಸಿಕೊಡಬೇಕು. ನೀವು ನನ್ನ ಮಂತ್ರ ತಂತ್ರಗಳಿಗೆ ಒಳಗಾಗಬೇಕು. ನಿಮಗೆ ಹಂಚು ಹೊದಿಸಿ ಸ್ಥಾನ ಕಟ್ಟಿಸುತ್ತೇನೆ; ಕಲಶ ಇರಿಸುತ್ತೇನೆ. ನೈವೇದ್ಯ ಇರಿಸುತ್ತೇನೆ; ನೇಮ ಕೊಡಿಸುತ್ತೇನೆ"- ಎಂದು ಹರಕೆ ಹೇಳಿಕೊಂಡ.

ವೈಲಾಯನ ಕೇಳಿಕೆಯನ್ನು ದೈವಗಳು ಒಪ್ಪಿಕೊಂಡವು. ವೈಲಾಯ ಕಾರ್ಕಳದ ಅರಸನ ಅರಮನೆಗೆ ಬಂದ; ಅರಸನನ್ನು ನೋಡಿದ. ನಡೆದ ವಿಚಾರಗಳನ್ನು ಒಂದೂ ಬಿಡದೆ ಅರಸ

ವೈಲಾಯನಲ್ಲಿ ಹೇಳಿದ. ಹೇಗಾದರೂ ಭೂತಗಳ ಪೀಡೆಯನ್ನು ನಿಲ್ಲಿಸಬೇಕೆಂದು ಬೇಡಿಕೊಂಡ.

ಮಂತ್ರವಾದದ ಚಪ್ಪರದಲ್ಲಿ ವೈಲಾಯ ಮಂಡಲನನ್ನು ಬರೆದ. ಹೋಮ ಮಾಡಿದ. ಮಂತ್ರ ತಂತ್ರದ ಕೆಲಸ ಆರಂಭಿಸಿದ. ಕುಶಲತೆಯಿಂದ ಭೂತಗಳನ್ನು ತೆಂಗಿನ ಕಾಯೊಳಗೆ ಆವಾಹಿಸಿದ. ಆ ಕಾಯಿಯನ್ನು ತನ್ನ ಊರಿಗೆ ಹಿಡಿದುಕೊಂಡು ಹೋದ.

"ಭೂತ ತೆಂಗಿನ ಕಾಯಿಯ ಒಳಗೆ ಹೋದದ್ದು ಹೇಗೆ?"- ಎಂದು ಕೇಳಿದ ವಾಸು.

"ಮನುಷ್ಯರಿಗೆ ಇಲ್ಲದ ಶಕ್ತಿ ಭೂತಗಳಿಗೆ ಇದೆ ಎಂದು ಜನರ ನಂಬಿಕೆ. ಆಕಾರದಲ್ಲಿ ದೊಡ್ಡದಾಗುವುದಕ್ಕೂ ಚಿಕ್ಕದಾಗುವುದಕ್ಕೂ ಭೂತಗಳಿಗೆ ಕಷ್ಟವಿಲ್ಲವಂತೆ. ಮಾಯಕವಾಗಲೂ ಪ್ರತ್ಯಕ್ಷವಾಗಲೂ ಸಾಧ್ಯವಂತೆ. ವಿಚಿತ್ರ ತರದ ಕೆಲಸಗಳನ್ನೂ ಅವು ಸುಲಭವಾಗಿ ಮಾಡುತ್ತವಂತೆ.

ಇಂಥ ಭೂತಗಳನ್ನು ಮಂತ್ರವಾದಿ ತನ್ನ ಕೈವಶ ಮಾಡಿಕೊಂಡು ತನಗೆ ಬೇಕಾದಂತೆ ಕುಣಿಸಬಲ್ಲನಂತೆ, ಇವೆಲ್ಲ ಜನರ ನಂಬಿಕೆ."

ಹೇಗೂ ಕಾರ್ಕಳದಲ್ಲಿ ಭೂತಗಳ ಉಪಟಳ ನಿಂತಿತು. ಅನ್ಯಾಯ ಮಾಡಿದ ಅರಸನಿಗೆ ಸಾಕಷ್ಟು ಶಿಕ್ಷೆಯೂ ಆಯಿತು.

ಹೇಳಿಕೊಂಡ ಹರಕೆಯಂತೆ ವೈಲಾಯ ನಡೆದುಕೊಂಡ. ಉಬಾರಿನಲ್ಲಿ ಕಲ್ಕುಡ ಕಾಳಮ್ಮರಿಗೆ ಹಂಚು ಹೊದಿಸಿದ ದೈವಸ್ಥಾನ ಕಟ್ಟಿಸಿದ. ಅದಕ್ಕೆ ಉಂಬಳಿಯನ್ನು ಬಿಟ್ಟ. ದೈವಗಳಿಗೆ ಹಾಲು ಅಕ್ಕಿಯ ನೈವೇದ್ಯ ಇರಿಸಿದ. ಊರವರನ್ನು ಕೂಡಿ ಹಾಕಿ ನೇಮಕ್ಕೆ ದಿನ ನಿಶ್ಚಯ ಮಾಡಿದ. ಊರವರು ಸೇರಿ ದೊಡ್ಡ ಚಪ್ಪರ ಹಾಕಿದರು. ನೇಮದ ಹೆಸರಲ್ಲಿ ಬಾನೆಗೊನೆ ಮುಹೂರ್ತ ಮಾಡಿದರು. ನೇಮದ ಸನ್ನಾಹ ಜೋಡಿಸಿದರು. ನೇಮಕ್ಕೆ ಭಂಡಾರ ಏರಿತು. ಕೊಂಬುವಾಲಗ ಸಿಡಿಮದ್ದುಗಳ ಸಂಭ್ರಮದಲ್ಲಿ ನೇಮ ನಡೆಯಿತು. ನೇಮವನ್ನು ಕೈಕೊಂಡ ದೈವಗಳು ವೈಲಾಯನಿಗೂ ಊರಿನ ಹತ್ತು ಸಮಸ್ತರಿಗೂ ಒಳ್ಳೆಯ ನುಡಿ ನೀಡಿ ಹರಸಿದವು. ಈ ಹೊಸ ದೈವಗಳ ನೇಮದ ವಿಚಾರ ನಾಲ್ಕೂ ಸುತ್ತಿನ ಊರುಗಳಿಗೆ ಹಬ್ಬಿತು.

ಕಾಳಮ್ಮನನ್ನು ಕಲ್ಲುರ್ಟಿ, ಸತ್ಯದೇವತೆ, ಪಾಷಾಣ ಮೂರ್ತಿ ಎಂದೂ ಕರೆಯುತ್ತಾರೆ. ಉಬಾರಿನಲ್ಲಿ ಮೊದಲು ನೆಲೆಯೂರಿದ ಕಲ್ಲುರ್ಟಿ ಕಲ್ಕುಡರು ಬಳಿಕ ಬೇರೆ ಬೇರೆ ಕಡೆಗಳಿಗೆ ತೆರಳಿದರು; ತಮ್ಮ ಕಲೆ ಕಾರಣಿಕಗಳನ್ನು ತೋರಿಸಿ ಅಲ್ಲಲ್ಲಿ ನೆಲಸಿದರು. ಪೂಜೆ, ಕಾಣಿಕೆ, ಅಗಲು, ಕೋಲಗಳನ್ನು ಪಡೆದರು." ಎಂದು ಮಾಸ್ತರರು ಕತೆಯನ್ನು ಮುಗಿಸಿದರು.

" ಭಾರೀ ಚಂದದ ಕತೆ!" - ಎಂದಳು ಕನಕ. ಉಳಿದವರೂ ಅದಕ್ಕೆ ದನಿಗೂಡಿಸಿದರು.

"ಇಂಥ ಅನೇಕ ಕತೆಗಳು ದೈವಗಳ ಪಾಡ್ದನಗಳಲ್ಲಿವೆ. ಈ ದಿನದ ಮಟ್ಟಿಗೆ ಇಷ್ಟು ಸಾಕು. ಈಗ ನಿಮಗೆ ಬಾಯಾರಿಕೆ ಆಗಿರಬಹುದು. ನನಗೂ ಸ್ವಲ್ಪ ಬಾಯಾರಿಕೆಯಾಗಿದೆ. ನಾವು ತಂದಿರುವ ಕಲ್ಲಂಗಡಿ ಹಣ್ಣು ಎಲ್ಲಿದೆ?" - ಎಂದು ಮೋರೆಯ ಬೆವರನ್ನು ಒರಸಿಕೊಂಡರು ಮಾಸ್ತರರು.

ಇಬ್ಬರು ಹುಡುಗರು ಬಸ್ಸಿನೆಡೆಗೆ ಓಡಿ ಹೋದರು. ಬಸ್ಸಿನಲ್ಲಿ ಇರಿಸಿದ್ದ ದೊಡ್ಡ ಎರಡು ಕಲ್ಲಂಗಡಿ ಹಣ್ಣುಗಳನ್ನು ಹೊತ್ತುಕೊಂಡು ಬಂದರು. ಮಾಸ್ತರರು ಅದನ್ನು ಚೂರಿಯಿಂದ ಓರಣವಾಗಿ ತುಂಡು ಮಾಡಿದರು. ಎಲ್ಲರಿಗೂ ಹಂಚಿದರು. ಎಲ್ಲರ ಹೊಟ್ಟೆ ತಂಪಾಯಿತು. ಗೋಮಟೇಶ್ವರ ಸ್ವಾಮಿಗೆ ನಮಸ್ಕಾರ ಸಲ್ಲಿಸಿ ಎಲ್ಲರೂ ಬಸ್ಸು ಹತ್ತಿದರು. ಅವರ ಮನಸ್ಸಿನೊಳಗೆ ವೀರ ಕಲ್ಕುಡನ ಕತೆಯೇ ಮಾರ್ದನಿಸುತ್ತಿತ್ತು.

❖❖❖❖❖

ಜೋಕ್ಲೆಗಾದ್ ತುಳು ಕತೆಕ್ಕುಲು

1.	ಕೋಟಿ- ಚೆನ್ನಯ	:	ಡಾ. ವಾಮನ ನಂದಾವರ
2.	ಅಕ್ಕೆರಸು ಸಿರಿ	:	ಎ. ವಿ. ನಾವಡ
3.	ಕೋಡ್ದಬ್ಬು	:	ಡಾ. ಸುಶೀಲಾ ಉಪಾಧ್ಯಾಯ
4.	ಪರತಿ ಮಂಗನೆ	:	ಕೆ. ಲೀಲಾವತಿ
5.	ಪುಳ್ಳೂರ ಬಾಚೆ	:	ವೆಂಕಟರಾಜ ಪುಣಿಂಚತ್ತಾಯ
6.	ಅಬ್ಬಗೆ ದಾರಗೆ	:	ಕೆ.ಜೆ. ಶೆಟ್ಟಿ ಕಂಡಂದಲೆ
7.	ಮೂಂಕು ಸಂಬಳೊ	:	ಡಾ. ಕೆ. ಚಿನ್ನಪ್ಪ ಗೌಡ
8.	ಮಗೆ ಬರವು ಕಲ್ತೆ	:	ಕನರಾಡಿ ವಾದಿರಾಜ ಭಟ್
9.	ಮಾಯಾಂದಾಳ್	:	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	:	ಅಮೃತ ಸೋಮೇಶ್ವರ
11.	ಬನ್ನಾಲ್	:	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	:	ಡಾ. ಗಣನಾಥ ಶೆಟ್ಟಿ ಎಕ್ಕಾರು
13.	ಜೋಗಿ ಪುರುಸೆರ್	:	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜನೆ	:	ಗಣೇಶ ಅಮೀನ್ ಸಂಕಮಾರ್
15.	ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ	:	ಕೆ. ಆರ್. ರೈ
16.	ನಾಗಸಿರಿ	:	ಅನಂತರಾಮ ಬಂಗಾಡಿ
17.	ಮಾಯೊದ ಪೊಣ್ಣು	:	ಡಿ. ಯದುಪತಿ ಗೌಡ
18.	ಮುಡಿಪ್ಪೆರಾವಂದಿ ಮಲ್ಲಿಗೆ	:	ಎನ್. ಕೊಯಿರಾ ಬಾಳೆಪುಣಿ
19.	ಅಪ್ಪೊದಡ್ಯೆ	:	ಮುದ್ದು ಮೂಡುಬೆಳ್ಳೆ
20.	ಭೂತಾಳ ಪಾಂಡ್ಯೆ	:	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್